ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 06 ಡಿವಿಪಿ (1) 2018.

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 18-07-2018.

**: ಅಧಿಕೃತ ಟಿಪ್ಪಣಿ :**

**ವಿಷಯ:** ಅನುದಾನಿತ ಪಾಲಿಟೆಕ್ನಿಕ್‌ಗಳು ಬೋಧನಾ ಶುಲ್ಕ ಪಾವತಿ, Utilization Certificate, Audited Statement ಹಾಗೂ Income and Expenditure statement ಗಳನ್ನು ಸಲ್ಲಿಸುವ ಬಗ್ಗೆ

**ಉಲ್ಲೇಖ:** ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ 22-05-2018

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಅನುದಾನಿತ ಪಾಲಿಟೆಕ್ನಿಕ್‌ಗಳು ಮಹಾಲೆಕ್ಕಪರಿಶೋಧನೆಗಾಗಿ ಈ ಕೆಳಕಂಡ ಮಾಹಿತಿಯನ್ನು ದ್ವಿಪ್ರತಿಯಲ್ಲಿ ದಿನಾಂಕ 20-06-2018 ರೊಳಗೆ ಸಲ್ಲಿಸಲು ಸೂಚಿಸಲಾಗಿತ್ತು.

1. 2015-16, 2016-17 ಮತ್ತು 2017-18 ರ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಕ್ಕೆ ಕಟ್ಟಬೇಕಾದ ಬೋಧನಾ ಶುಲ್ಕವನ್ನು ಪಾವತಿಸಿರುವ ಬಗ್ಗೆ ದಾಖಲೆ.
2. 2015-16, 2016-17 ಮತ್ತು 2017-18 ರ ಆರ್ಥಿಕ ವರ್ಷದಲ್ಲಿ ಇಲಾಖೆಯಿಂದ ಬಿಡುಗಡೆಯಾದ ಒಟ್ಟು ಅನುದಾನಕ್ಕೆ Utilization Certificate ವರ್ಷವಾರು ನೀಡುವುದು.
3. 2015-16, 2016-17 ಮತ್ತು 2017-18 ರ ಆರ್ಥಿಕ ವರ್ಷದ ಸಂಸ್ಥೆಯ Audited Statement ವರ್ಷವಾರು ನೀಡುವುದು.
4. 2015-16, 2016-17 ಮತ್ತು 2017-18 ರ ಆರ್ಥಿಕ ವರ್ಷದ ಸಂಸ್ಥೆಯ Income and Expenditure statement ವರ್ಷವಾರು ನೀಡುವುದು.

ಆದರೆ ಈ ಕೆಳಕಂಡ ಸಂಸ್ಥೆಗಳು ಈ ದಿನದವರೆಗೂ ಈ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ಸದರಿ ಮಾಹಿತಿಯನ್ನು ಮಹಾಲೇಖಪಾಲರಿಗೆ ಸಲ್ಲಿಸಬೇಕಾಗಿದ್ದು, ಈ ವಿಷಯವನ್ನು ಅತೀ ಗಂಭೀರವಾಗಿ ಪರಿಗಣಿಸಿ ದಿನಾಂಕ 23-07-2018 ರೊಳಗೆ ಸಲ್ಲಿಸುವುದು. ಈ ಮಾಹಿತಿಯು ಅನುದಾನ ಬಿಡುಗಡೆಗೆ ಅತ್ಯಗತ್ಯವಾಗಿದ್ದು, ನಿಗಧಿತ ಅವಧಿಯಲ್ಲಿ ಮಾಹಿತಿಯನ್ನು ಸಲ್ಲಿಸದೇ ಇದ್ದಲ್ಲಿ, ಮಾಹೆಯ ವೇತನಾನುದಾನವನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ಕ್ರಮವಹಿಸಲಾಗುವುದು ಹಾಗೂ ಇದಕ್ಕೆ ಪ್ರಿನ್ಸಿಪಾಲರೇ ನೇರ ಹೊಣೆಗಾರರಾಗುತ್ತಾರೆ ಎಂಬ ವಿಷಯವನ್ನು ಸಹ ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು.
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.

**ಇವರಿಗೆ,**

1) ಪ್ರಿನ್ಸಿಪಾಲರು, ಎ.ಪಿ.ಎಸ್ ಪಾಲಿಟೆಕ್ನಿಕ್, ಬೆಂಗಳೂರು
2) ಪ್ರಿನ್ಸಿಪಾಲರು, ರೂರಲ್ ಪಾಲಿಟೆಕ್ನಿಕ್, ಹುಲಿಕೋಟೆ
3) ಪ್ರಿನ್ಸಿಪಾಲರು, ಜೆ.ಎನ್. ಪಾಲಿಟೆಕ್ನಿಕ್, ಭಾನಕುಶನೂರು, ಬೀದರ್
4) ಪ್ರಿನ್ಸಿಪಾಲರು, ನೂತನ್ ವಿದ್ಯಾಲಯ ಸೊಸೈಟಿಯ ಪಾಲಿಟೆಕ್ನಿಕ್, ಗುಲ್ಬರ್ಗಾ
5) ಪ್ರಿನ್ಸಿಪಾಲರು, ಡಿ.ಬನುಮಯ್ಯ ಪಾಲಿಟೆಕ್ನಿಕ್, ಮೈಸೂರು
6) ಪ್ರಿನ್ಸಿಪಾಲರು, ಸಿ.ವಿ ಚರಂತೀಮಠ ರೂರಲ್ ಪಾಲಿಟೆಕ್ನಿಕ್, ಹುನಗುಂದ
7) ಪ್ರಿನ್ಸಿಪಾಲರು, ಎಸ್.ಇ.ಎಸ್ ಪಾಲಿಟೆಕ್ನಿಕ್, ಸಿರಗುಪ್ಪ
8) ಪ್ರಿನ್ಸಿಪಾಲರು, ಎಸ್.ಜಿ.ಇ.ಎಸ್ ರೂರಲ್ ಪಾಲಿಟೆಕ್ನಿಕ್, ತಾರಿಹಾಳ್, ಹುಬ್ಬಳ್ಳಿ